
# "ಜೀವನ ಮತ್ತು ಸಂಘರ್ಷ"



ಸಂಪಾದಕರು

ರೆ. ಫಾ. ಡಾ. ಥಾಮಸ್ ಎಂ.ಜೆ

ಪ್ರೊ. ಸಾವಿತ್ರಿ . ಸಿ

ಪ್ರೊ.ಮಾನಸ ಜಿ.ಸಿ

ಡಾ. ಪ್ರಶಾಂತ್.ವಿ

ಪ್ರಕಾಶಕರು

ಸೇಂಟ್ ಪೌಲ್ಸ್ ಕಾಲೇಜು, ಬೆಂಗಳೂರು

https://mail.google.com/mail/u/0/?dispatcher_command=master_lookup#inbox/FMfcgzGrcrrFHbcsgpnlSfKFrLMmkcxH?projector=1&messagePart... 1/1

ಸೆಂಟ್ ಪೌಲ್ಸ್ ಕಾಲೇಜು ೨೦೧೬ ರಂದು ವರ್ಗೀಸ್ ಗ್ಯಾಲಿಯನ್ ಅವರ ನೇತೃತ್ವದಲ್ಲಿ ಪ್ರಾರಂಭಿಸಲಾಯಿತು. ಅಂದು ರೆ. ಫಾ. ಪೃಥ್ವಿರಾಜ್ ರವರು ಪ್ರಾಂಶುಪಾಲರಾಗಿದ್ದು, ಇಂದು ರೆ. ಫಾ. ಡಾ. ಥಾಮಸ್ ಎಂ.ಜೆ ರವರು ಪ್ರಾಂಶುಪಾಲರಾಗಿ ಸಂಸ್ಥೆಯನ್ನು ಮುನ್ನಡೆಸುತ್ತಿದ್ದಾರೆ. ಪ್ರಾರಂಭಿಕವಾಗಿ ಬಿ.ಕಾಂ, ಬಿ.ಎ ತರಗತಿಗಳಿಂದ ಪ್ರಾರಂಭವಾದ ನಮ್ಮ ಕಾಲೇಜು ಕೇವಲ ೧೬ ವಿದ್ಯಾರ್ಥಿಗಳನ್ನು ಹೊಂದಿತ್ತು, ಈ ಸಂಸ್ಥೆ ಪ್ರಸ್ತುತ ಬಿ.ಕಾಂ, ಬಿ.ಎ, ಬಿ.ಬಿ.ಎ, ಬಿ.ಎಸ್ಸಿ, ಬಿ.ಸಿ.ಎ ವಿಭಾಗಗಳಿಂದ ೫೦೦ ರಷ್ಟು ಹೆಚ್ಚು ವಿದ್ಯಾರ್ಥಿಗಳನ್ನು ಹೊದಿದ್ದು, ಪ್ರಸಿದ್ಧ ಕಾಲೇಜುಗಳಲ್ಲಿ ಒಂದಾಗಿದೆ. ಅದರಲ್ಲೂ ನಮ್ಮ ಕಾಲೇಜು ಪತ್ರಿಕಾ ವಿಭಾಗದಲ್ಲಿ ದೇಶದಲ್ಲೇ ಪ್ರಥಮ ಕಾಲೇಜು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಮೂಲತಃ ಸೆಂಟ್ ಪೌಲ್ಸ್ ಕಾಲೇಜು ನ್ಯಾಯಾಧಿಕರಿಯಾದ ಸೆಂಟ್ ಪೌಲ್ಸ್ ಸಂಸ್ಥೆಯ ಆಡಳಿತ ಮಂಡಳಿಗೆ ಒಳಪಟ್ಟಿದ್ದು, ಈ ಸಂಸ್ಥೆಯು ಅಧ್ಯಕ್ಷರು ರೆ. ಫಾ. ಡಾ. ಟಿ.ಸಿ. ಜೋಸೆಫ್, ಆಡಳಿತಾಧಿಕಾರಿ ರೆ. ಫಾ. ಆರೋಕ್ಯಸ್ವಾಮಿ, ಪ್ರಾಂಶುಪಾಲರು ರೆ. ಫಾ. ಡಾ. ಥಾಮಸ್ ಎಂ.ಜೆ, ಉಪಪ್ರಾಂಶುಪಾಲರು ರೆ. ಫಾ. ಡಾ. ಸಜಿತ್ ಸಿರಿಯಾಕ್ ಇವರೆಲ್ಲರ ಸಹಕಾರ, ಸಹಯೋಗದೊಂದಿಗೆ ಕಾಲೇಜಿನ ಶೈಕ್ಷಣಿಕ, ಕ್ರೀಡೆ, ಸಾಂಸ್ಕೃತಿಕ, ಗ್ರಂಥಾಲಯ ಮುಂತಾದ ಎಲ್ಲಾ ಚಟುವಟಿಕೆಗಳು ಅತ್ಯಂತ ಯಶಸ್ವಿಯಾಗಿ ನೆರವೇರುತ್ತಿರುವುದಕ್ಕೆ ಸಾಧ್ಯವಾಗಿದೆ. ಇದಲ್ಲದೆ ಸ್ನಾತಕೋತ್ತರ ಸಮೂಹ ಮಾಧ್ಯಮ ವಿಭಾಗ ದೇಶದಲ್ಲಿಯೇ ಉತ್ತಮ ಕಾಲೇಜುಗಳಲ್ಲಿ ಪ್ರಥಮ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವುದು ಹೆಮ್ಮೆ ಎನಿಸುತ್ತದೆ.

ವಿಚಾರ ಸಂಕಿರಣದ ಆಶಯ :

'ಶ್ರೀ' ಎಂಬ ಕಾವ್ಯನಾಮವನ್ನು ಹೊಂದಿದ್ದ ಹಾಗೂ "ಕನ್ನಡದ ಆಸ್ತಿ", "ಸಣ್ಣ ಕಥೆಗಳ ಜನಕ" "ಕನ್ನಡದ ಆಸ್ತಿ" ಎಂದೇ ಪ್ರಸಿದ್ಧರಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಕನ್ನಡ ಸಾಹಿತ್ಯ ಲೋಕದ ಧ್ರುವತಾರೆಗಳಲ್ಲೊಬ್ಬರು. ಪ್ರಮುಖವಾಗಿ ಇವರು ಕನ್ನಡಿಗರಿಗೆ ಒಂದು ಆದರ್ಶ, ಎಂಥ ಕಷ್ಟ ಕಾಲದಲ್ಲೂ ಜೀವನವನ್ನೆದುರಿಸಿ ಸಾಹಿತ್ಯ ರಚನೆ ಮಾಡಿ ಅದರ ಪೋಷಕರಾದರು. ಮಾಸ್ತಿಯವರು ಸಣ್ಣ ಕಥೆಗಳ ರಚನೆಯನ್ನು ಪ್ರಧಾನವಾಗಿ ಆರಿಸಿಕೊಂಡ ಇವರು ನೂರಾರು ಸಣ್ಣ ಕಥೆಗಳನ್ನು ಬರೆದರು. ಹಲವಾರು ಕಥಾಸಂಕಲನಗಳನ್ನು ಪ್ರಕಟಿಸಿದರು. ಅಲ್ಲದೆ ಕಾದಂಬರಿಗಳು, ನಾಟಕಗಳು, ವಿಮರ್ಶೆಗಳು, ಪ್ರಬಂಧಗಳು, ಧಾರ್ಮಿಕ ಕೃತಿಗಳು, ಅನುವಾದ, 'ಜೀವನ' ಎಂಬ ಅವರೇ ನಡೆಸುತ್ತಿದ್ದ ಪತ್ರಿಕೆಯಲ್ಲಿ ಅನೇಕ ಸಂಪಾದಕೀಯ ಲೇಖನಗಳನ್ನು ಬರೆದಿದ್ದಾರೆ. ಇಂತಹ ವಿದ್ವಾಂಸರ ಸೃಜನಶೀಲತೆಯ ಮಹತ್ವದ ಬಗ್ಗೆ ಅರಿವು ಮೂಡಿಸುವ ಆಶಯದಿಂದ ಹಾಗೂ ಪ್ರತಿಯೊಬ್ಬರ ಜೀವನ ಒಂದಲ್ಲ ಒಂದು ರೀತಿಯ ಸಮಸ್ಯೆಗಳಿಂದಲೇ ಕೂಡಿರುತ್ತದೆ. ಸಮಸ್ಯೆ ಸಂಘರ್ಷಗಳ ಸಂತೋಷಗಳ ಸಮ್ಮಿಲನವೇ ಜೀವನ. 'ಮನುಷ್ಯನಿಗೆ ಜೀವನದಲ್ಲಿ ಸಂಕಷ್ಟಗಳು ಬೇಕಾಗುತ್ತವೆ, ಏಕೆಂದರೆ ಯಶಸ್ಸನ್ನು ಸಂಭ್ರಮಿಸಲು ಅವು ಬೇಕಾಗುತ್ತವೆ' - ಎಂದು ಅಬ್ದುಲ್ ಕಲಾಂ ಅವರು ಸಂಘರ್ಷದ ಕುರಿತು ಹೇಳುತ್ತಾರೆ. ಅಂದರೆ ಸಂಘರ್ಷವಿಲ್ಲದ ಜೀವನ ನಮಗೆ ಯಾವುದೇ ಅನುಭವವನ್ನು ಸಂಪೂರ್ಣವಾಗಿ ಅರಿಯಲು ಸಾಧ್ಯ ಮಾಡಿಕೊಡುವುದಿಲ್ಲ. ಒಬ್ಬರನ್ನು ತುಳಿದು ಮತ್ತೊಬ್ಬರು ಮೇಲೇರುವ ಪ್ರವೃತ್ತಿ ಇಂದು ನೆನ್ನೆಯದಲ್ಲ, ಈ ಜಗದ ಹುಟ್ಟಿನಿಂದ ಬಂದದ್ದು. ಹಾಗಾಗಿ ಎದುರಾಗುವ ಯಾವುದೇ ಸಮಸ್ಯೆಯನ್ನು ಅರ್ಥೈಸುವ ಎದುರಿಸಿ ನಿಲ್ಲುವ ಅದರಿಂದ ಹೊರಬರುವ ವ್ಯಕ್ತಿತ್ವ ರೂಪಿಸಿಕೊಳ್ಳುವ ಕಲೆಯ ಬದುಕು ನಮ್ಮೆಲ್ಲರದಾಗಬೇಕು ಎಂಬ ಆಶಯದೊಂದಿಗೆ ಈ ಎರಡೂ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು.

ಪ್ರಕಾಶನ
ಸೆಂಟ್ ಪೌಲ್ಸ್ ಕಾಲೇಜು
ನೆಲಗದರನಹಳ್ಳಿ
ಬೆಂಗಳೂರು - ೭೩

https://mail.google.com/mail/u/0/?dispatcher_command=master_lookup#inbox/FMfcgzGrcrFHbcsgpntSfKFrLMmkcxH?projector=1&messagePart... 1/1

# ಪರಿವಿಡಿ

ISBN -978-81-955923-1-9 2022

1. ಮಾಸ್ತಿಯವರ ಬದುಕು ಬರಹ - ಡಾ. ಸವಿತಾ ರವಿಶಂಕರ್_______________06

ಮಾಸ್ತಿಯವರ ಕಥೆಗಳಲ್ಲಿ ಮಾನವೀಯತ್ವದ ಹುಡುಕಾಟ ಮಾಸ್ತಿಯವರ ಪರಿಚಯ

2. ಕನ್ನಡ ಕಥಾ ಪರಂಪರೆಯಲ್ಲಿ 'ಮಾಸ್ತಿ'- ಡಾ. ಶಶಿರೇಖಾ. ಎಸ್, ಕರಿಬಸಣ್ಣ.ಟಿ______11

3. ಮಾಸ್ತಿ ಅವರ ಕಾವ್ಯದಲ್ಲಿ ರಾಷ್ಟ್ರೀಯತೆ– ಡಾ. ಮಾದೇಶ .ಎಸ್,

ಡಾ. ಕುಮಾರ ಇಂದ್ರಬೆಟ್ಟ. ______________________________________16

4. ಮಾಸ್ತಿಯವರ ಸಣ್ಣ ಕತೆಗಳು– ಆನಂದಎಸ್.ಎನ್________________________18

5. ಮಾಸ್ತಿಯವರ ಸಣ್ಣ ಕಥೆಗಳಲ್ಲಿ ಸ್ತ್ರೀ ಪಾತ್ರ - ಸಾವಿತ್ರಿ ಸಿ. ________________26

6. ಮಾಸ್ತಿಯವರ ಜೀವನ ಮತ್ತು ಸಾಹಿತ್ಯ ಸಾರ- ಡಾ. ಸಿದ್ದಲಿಂಗಪ್ಪ ದೇಶ್ ಮುಖ್.___30

7. ಮಾಸ್ತಿ ಕಥೆಗಳಲ್ಲಿ ಸ್ತ್ರೀ ಪಾತ್ರಗಳು– ಡಾ.ಪಿ.ನಟರಾಜು_____________________33

8. ಮಾಸ್ತಿ ಕಥೆಗಳಲ್ಲಿ ಜೀವನ ಮೌಲ್ಯಗಳು- ರವಿಶಂಕರ್ ಜೆ___________________37

9. ಮಾಸ್ತಿ ಬದುಕು ಬರಹ - ಶಂಕರಯ್ಯ ಎಂ.ಎಸ್ _______________________39

10 ಭೈರಪ್ಪನವರ ಕಾದಂಬರಿಗಳಲ್ಲಿ "ಕೇಂದ್ರ ಕಾಳಜಿ ಮತ್ತು ಬದ್ಧತೆ"ಭೈರಪ್ಪನವರ ದಾಟು

ಕಾದಂಬರಿಯಲ್ಲಿ ಸಂಶೋಧನಾ ದೃಷ್ಟಿ–ಡಾ.ಶೀಲಾದೇವಿಎಸ್.ಮಳೀಮಠ್__________41

11. ಸಮಾಜ ಮತ್ತು ಸಂಘರ್ಷ– ಡಾ. ರತಿ ಎಂ.ಟಿ__________________________45

12. ಕನ್ನಡ ಭಾಷಾ ನೀತಿಯ ಸಂಘರ್ಷ ಮತ್ತು ಪರಿಹಾರ- ಪ್ರೊ. ಶಶಿಕಲಾ _________48

13.ಸಿದ್ಧಲಿಂಗಯ್ಯನವರ ಕಾವ್ಯದಲ್ಲಿ ಶೋಷಕ ಮತ್ತು ಶೋಷಿತರ ನಡುವಿನ ಸಂಘರ್ಷಾತ್ಮಕ

ನೆಲೆಗಳು ಪ್ರೊ.ವೀಣಾ, ಡಾ.ಶಾಂತರಾಜು.______________________________53

14. ಅಪ್ರತಿಮ ಹೋರಾಟಗಾರ ಲೂಥರ್ ಕಿಂಗ್–ಕುಮಾರಿ ಕಾವ್ಯ, ಕುಮಾರಿ ವಂದಿತ ___56

15.ಜ್ಞಾನ ಬಲದ ಸಂಕೇತ (ಸಾವಿತ್ರಿ ಬಾಯಿ ಪುಲೆ)–ಕುಮಾರಿ ಸುಹಾಸಿನಿ, ಕುಮಾರಿ ____59

16.ಮಾಸ್ತಿಯವರ ಬದುಕು ಮತ್ತು ಬರಹ –ಡಾ. ಪ್ರಕಾಶ್____________________62

# ಡಾ.ಸಿದ್ದಲಿಂಗಯ್ಯನವರ ಕಾವ್ಯದಲ್ಲಿ ಶೋಷಕ ಮತ್ತು ಶೋಷಿತರ ನಡುವಿನ ಸಂಘರ್ಷಾತ್ಮಕ ನೆಲೆಗಳು

**ಪ್ರೊ.ವೀಣಾ ಎನ್**
**ಸಹಾಯಕ ಪ್ರಾಧ್ಯಾಪಕರು**
**ಕನ್ನಡ ವಿಭಾಗ, ಸಂತ ಫ್ರಾನ್ಸಿಸ್ ಡಿ ಸಾಲೆಸ್ ಕಾಲೇಜು**
**ಹೆಬ್ಬಗೋಡಿ, ಎಲೆಕ್ಟ್ರಾನಿಕ್ ಸಿಟಿ ಅಂಚೆ, ಬೆಂಗಳೂರು – 100**

**ಡಾ.ಶಾಂತರಾಜು**
**ಸಹಾಯಕ ಪ್ರಾಧ್ಯಾಪಕರು**
**ಕನ್ನಡ ವಿಭಾಗ, ಸಂತ ಫ್ರಾನ್ಸಿಸ್ ಡಿ ಸಾಲೆಸ್ ಕಾಲೇಜು**
**ಹೆಬ್ಬಗೋಡಿ, ಎಲೆಕ್ಟ್ರಾನಿಕ್ ಸಿಟಿ ಅಂಚೆ, ಬೆಂಗಳೂರು – 100**

'ಸಾವಿರಾರು ನದಿಗಳು ಕೂಡಿ ಸಾಗರವಾಗಿ ಭೋರ್ಗರೆದಾಗ ಮಾತ್ರ ಅನ್ಯಾಯ, ಶೋಷಣೆ ಎಂಬ ಕೊಂಡಿಯನ್ನು ಕಳಚಬಹುದು" ಎಂಬ ಕ್ರಾಂತಿಯ ಕಿಡಿ ಬೀಸಿದ ಡಾ. ಸಿದ್ದಲಿಂಗಯ್ಯನವರು ಜನಪರ ಹೋರಾಟಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡು ಶೋಷಿತ ಜನಾಂಗದ ದನಿಯಾಗಿ, ನೊಂದವರ ಗಣಿಯಾಗಿ, ಅಕ್ಷರ ಜ್ಞಾನದ ಮಹತ್ವ ಸಾರಿ, ಶತಮಾನಗಳಿಂದ ಉಪೇಕ್ಷೆಗೆ ಅಸಡ್ಡೆಗಳಿಗೆ ಒಳಗಾಗಿದ್ದ ನಿಮ್ನ ವರ್ಗದ ಜನತೆಯ ನೋವು-ನಲಿವು, ದುಃಖ-ದುಮ್ಮಾನ ಅಸಹಾಯಕತೆ, ಆಕ್ರೋಶಗಳನ್ನು ತಮ್ಮ ಕಾವ್ಯಗಳಲ್ಲಿ ಜೀವಂತವಾಗಿಸಿದ್ದಾರೆ.

'ಸಾವಿರಾರು ನದಿಗಳಲ್ಲಿ' ನಿರಂತರವಾಗಿ ಶೋಷಣೆಗೆ ಒಳಗಾದ ಜನಾಂಗ, ಕೊನೆಗೊಮ್ಮೆ ಎಚ್ಚರಗೊಂಡು ಹೋರಾಟದ ಹಾದಿ ತುಳಿಯುತ್ತದೆ. ಶೋಷಣೆಯನ್ನು ಸಹಿಸದ ಜನರು ಎಂದಾದರೊಂದು ದಿನ ಸಾವಿರಾರು ನದಿಗಳಾಗಿ ಹರಿದು ತಮ್ಮ ಹಕ್ಕು ಸಮಾನತೆಗಳಿಗಾಗಿ ಹೋರಾಟದ ಕಣಕ್ಕಿಳಿದು ಶೋಷಣೆಯನ್ನು ಹತ್ತಿಕ್ಕುತ್ತಾರೆ ಎಂಬ ಇವರ ನಿಲುವು ನಿಜಕ್ಕೂ ಶ್ಲಾಘನೀಯ.

'ನಿನ್ನೆ ದಿನ ನನ್ನ ಜನ ಬೆಟ್ಟದಂತೆ ಬಂದರು' -ಶೋಷಿತ ಜನಾಂಗದ ದನಿಯಾಗಿ ಹುಟ್ಟಿದ ಈ ಕವಿತೆ ಸಮಾಜದ ಎರಡು ಮುಖಗಳಾದ ಶೋಷಕ ಮತ್ತು ಶೋಷಿತರನ್ನು ಮುಖಾಮುಖಿಯಾಗಿಸುವ ಸಂಘರ್ಷಾತ್ಮಕ ನೆಲೆಗಳಾಗಿ ಕಾಣಿಸುತ್ತವೆ. ಬಹುಕಾಲದ ಶೋಷಣೆಯನ್ನು ಅನುಭವಿಸಿ, ಇದೀಗ ತಾನೇ ಎಚ್ಚರಗೊಂಡ ಇವರು, ಅಸಮಾನತೆಯ ದಳ್ಳುರಿಯಲ್ಲಿ ಬೆಂದವರು. ಶೋಷಿತರಾದ ಇವರಲ್ಲಿ ಸಾಂಘಿಕ ಬಲವಿದೆ. ಬೆಟ್ಟಕ್ಕೆ ಇರುವ ಸ್ಥಿರತೆ, ಬಲ, ಅಚಲತೆ ಇವರಲ್ಲಿದೆ. ಇವರ ಒಗ್ಗೂಡುವಿಕೆಯಿಂದ ಏನನ್ನಾದರೂ ಸಾಧಿಸಬಹುದೆಂಬ ಗಟ್ಟಿ ಧ್ವನಿ ವ್ಯಕ್ತವಾಗುತ್ತದೆ.

'**ಕಪ್ಪುಮುಖ, ಬೆಳ್ಳಿಗಡ್ಡ ,ಉರಿಯುತ್ತಿರುವ ಕಣ್ಣುಗಳು**' , ಎಂತಹ ಅದ್ಭುತ ಸಾಲುಗಳಿವು. ಉರಿಬಿಸಿಲಲ್ಲಿ ದುಡಿದು, ದಣಿದು, ಕಪ್ಪಾಗಿರುವ ಅವರ ಮುಖಗಳು, ಕೇವಲ ಬಣ್ಣವನ್ನು ಸೂಚಿಸುವುದಿಲ್ಲ. ತನ್ನ ಇಡೀ ಕುಟುಂಬದ ಹೊಣೆಗಾರಿಕೆ ಹೊತ್ತು, ಜವಾಬ್ದಾರಿಯನ್ನು ಹೆಗಲಿಗೇರಿಸಿಕೊಂಡಿರುವ ಒಂದು ಅದ್ಭುತ ಶಕ್ತಿಯಾಗಿ ಕಾಣುತ್ತದೆ. ತನ್ನ ಇಡೀ ದುಡಿಮೆಯಲ್ಲಿ ಬಾಳನ್ನು ಕಳೆದಿದ್ದಾರೆ. ಯೌವನಾವಸ್ಥೆಯಿಂದ ತನ್ನ ಗಡ್ಡ ಬಿಳಿಯಾಗುವ ಮುದಿವಯಸ್ಸಿನ ವರಗೂ ದುಡಿದು ದುಡಿದು ಹಣ್ಣಾಗಿರುವ ಈ ಜೀವಗಳು, ಇನ್ನು ಸಹಿಸಲಾರದ ಅತಿರೇಕಕ್ಕೆ ಬಂದು ನಿಂತಾಗ ಅವರ ಕಣ್ಣುಗಳು ಕೆಂಡದ ಉಂಡೆಗಳಾಗಿ ಕ್ರಾಂತಿಯ ಕಿಚ್ಚು ಎಲ್ಲೆಲ್ಲೂ ಹಬ್ಬಿಸುತ್ತ ನಿದ್ದೆಯನ್ನು ಹೊರದಬ್ಬಿ ಹೋರಾಟದ ಕಣಕ್ಕಿಳಿದು "ನೊಂದ, ಗಾಯಗೊಂಡ ಸಿಂಹದ ಉಸಿರು ಘರ್ಜನೆಗಿಂತ ಹೇಗೆ ಭಯಂಕರವೋ" ಅದೇ ತರನಾಗಿ, "ಸತತವಾಗಿ ಶೋಷಣೆಯ ಗಾಣದಲ್ಲಿ ಸಿಕ್ಕಿ ಗಾಯಗೊಂಡು ನೊಂದ ಆ ನೋವಿನ ಆಕ್ರೋಶವನ್ನು ವ್ಯಕ್ತಪಡಿಸುತ್ತಾ ಅಸಮಾನತೆಗೆ ಧಿಕ್ಕಾರ ಹೇಳುತ್ತಾ ಲಕ್ಷಾಂತರ ನಾಗರಗಳು ಹುತ್ತ ಬಿಟ್ಟು ಒಟ್ಟಿಗೆ ಬಂದಂತೆ ಭಾಸವಾಗುವ ದೃಶ್ಯ ದಲಿತ ಜನಾಂಗದ ಪ್ರಜ್ಞೆ ಜಾಗೃತವಾಗಿದೆ, ಆದಷ್ಟು ಬೇಗ ಶೋಷಣೆಯಿಂದ ಮುಕ್ತರಾಗುತ್ತಾರೆ, ಎಂಬ ಧ್ವನಿಯನ್ನು ಪ್ರತಿನಿಧಿಸುತ್ತದೆ.

"**ಇವರು ಬಾಯಿ ಬಿಟ್ಟೊಡನೆ ಅವರ ಬಾಯಿ ಕಟ್ಟಿತು. ಇವರ ಕಂಠ ಕೇಳಿದೊಡನೆ ಅವರ ದನಿ ಇಂಗಿತು**" : ಅದೆಂತಹ ಶಕ್ತಿ ಇದೆ ಈ ಸಾಲುಗಳಿಗೆ. ಕೇವಲ ಅಕ್ಷರ ರೂಪದ ಸಾಲುಗಳಿಗೆ ಇಷ್ಟೊಂದು ಶಕ್ತಿ ಇರಬೇಕಾದರೆ, ಇನ್ನು ಇದನ್ನು ಪ್ರಾಯೋಗಿಕ ನೆಲೆಯಲ್ಲಿ ಕಂಡರೆ? ಹೌದು ನಾನು ಕಂಡ ಅದ್ಭುತ ಪ್ರತಿಭಟನೆಯ ಸಾಲುಗಳಿವು. ಅನ್ಯಾಯ, ಅಧರ್ಮ, ದಬ್ಬಾಳಿಕೆ, ಶೋಷಣೆಗಳಿಂದ ಶಾಶ್ವತ ವಿದಾಯದ ದಾರಿಯನ್ನು ಸೂಚಿಸುತ್ತದೆ. ಶೋಷಿತರ ಕ್ರಾಂತಿಗೆ ವಿಶೇಷ ಶಕ್ತಿ ಇದೆ. ತಮ್ಮ ಹಕ್ಕು ಸ್ವಾತಂತ್ರ್ಯಗಳ ಬಗ್ಗೆ ಧ್ವನಿ ಎತ್ತಿದಾಗ ತಮ್ಮ ಕಂಠಕ್ಕೆ ಇರುವ ಶಕ್ತಿಯಿಂದಾಗಿ, ಶೋಷಕರ ಬಾಯಿ ಕಟ್ಟುತ್ತಿದೆ. ಕ್ರಾಂತಿಯ ಬಿರುಗಾಳಿಯಲ್ಲಿ ತಮ್ಮನ್ನು ಶೋಷಿಸಿದವರ ಕುತ್ತಿಗೆಗಳನ್ನು ಹಿಡಿದು ದಬ್ಬಾಳಿಕೆಗೆ ಅಂತ್ಯವಾಡಲು ಸಾಗರ ಒಂದು ಬೇಕಿದೆ ಅದಕ್ಕೆ ಸಾವಿರಾರು ನದಿಗಳ ಒಗ್ಗೂಡುವಿಕೆ ಆಗಬೇಕಿದೆ, ಎಂಬ ಸಿದ್ಧಲಿಂಗಯ್ಯನವರ ಪ್ರತಿಭಟನಾತ್ಮಕ, ಅರ್ಥಗರ್ಭಿತವಾದ ನೆಲೆಗಳು ಇಲ್ಲಿ ಮುಖ್ಯವೆನಿಸುತ್ತದೆ.

ಒಂದು ಅಲಕ್ಷಿತ ಸಮುದಾಯದ ಅನುಭವಗಳನ್ನು ಯಾವ ಮುಲಾಜಿಲ್ಲದೆ ಎತ್ತರದ ದನಿಯಲ್ಲಿ ಸಾಮಾಜಿಕ ಸಮಾನತೆಗಾಗಿ ಕಾವ್ಯಗಳನ್ನು ಕಟ್ಟಿದ ಕವಿ ಸಿದ್ಧಲಿಂಗಯ್ಯನವರ ಮತ್ತೊಂದು ಕವಿತೆಯೇ '**ಚೋಮನ ಮಕ್ಕಳ ಹಾಡು**'. ಕಾರಂತರ ಚೋಮನದುಡಿ ಕಾದಂಬರಿಯ ಪ್ರೇರಣೆ ಪಡೆದು ಸೃಜನಗೊಂಡ ಕವನ ಇದಾಗಿದೆ. ಇಲ್ಲಿ ಬರುವ ಚೋಮ, ಶೋಷಿತ ಜನಾಂಗದ ಪ್ರತಿನಿಧಿಯಾಗಿ ಅನಾದಿಕಾಲದಿಂದಲೂ ದಲಿತ ಜನಾಂಗದವರು ಅನುಭವಿಸಿದ ನೋವನ್ನು ತನ್ನದೇ ಆದ ರೀತಿಯಲ್ಲಿ ವ್ಯಕ್ತಪಡಿಸುವ ಧಾಟಿ ವಿಶಿಷ್ಟವಾದದ್ದು. ಒಂದು ತುಂಡು ಭೂಮಿ ತನ್ನದಾಗಿಸಿಕೊಳ್ಳಬೇಕೆಂಬ ಬಯಕೆ ಆತನಲ್ಲಿ ಮೊಳಕೆಯೊಡೆದು ಒಡೆಯನಲ್ಲಿ ನಿವೇದಿಸಿಕೊಂಡರೂ, ಈ ಕ್ರೂರ ಸಮಾಜ ಅವನ ಬಯಕೆಯನ್ನು ಹೊಸಕಿ ನೆಲದ ಒಡೆತನ ನೀಡದೆ ದಲಿತರನ್ನು ಅತಂತ್ರಗೊಳಿಸುತ್ತಲೇ

ಬಂದಿರುವ ಸಮಾಜದ ವಿರುದ್ಧ ಸಿದ್ಧಲಿಂಗಯ್ಯನವರ ಆಕ್ರೋಶದ ಮಾತುಗಳನ್ನು ಈ ಕವಿತೆಯ ಮೂಲಕ ಕಾಣಬಹುದು. ತಮ್ಮ ಧಣಿಗಳ ಸುಖಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡು ಬದುಕಿನಲ್ಲಿ ಅರ್ಥ ಕಳೆದುಕೊಂಡ ದಲಿತರ ತ್ಯಾಗ ಮತ್ತು ಶ್ರಮಗಳು ವ್ಯರ್ಥವಾಗಿರುವುದು ದುರಂತಮಯ.

**"ಉಕ್ಕಿನ ಮಯ್ಯಿ ಹೂವಿನ ಮನಸ್ಸು ಮೂಡುವ ಭೂಮಿಯ ಗೇಣಿಯ ಕನಸು"**- ಕಾಯಕ ಯೋಗಿ ಆದ ಚೋಮನ ಕನಸನ್ನು ಅವನ ಮಕ್ಕಳು ವಿವರಿಸುವ ಈ ಸನ್ನಿವೇಶ ಮನಕಲಕುವಂತದ್ದು. ಶ್ರಮದೊಂದಿಗೆ ಬದುಕುವ ಅವರ ದೇಹ ಉಕ್ಕಿನಂತೆ ಗಡುಸಾದರು ಮನಸ್ಸು ಮಾತ್ರ ಹೂವಿನಂತೆ ಕೋಮಲ ಮತ್ತು ಮೃದು. ತಾಯಿ ಪ್ರೀತಿಯೇ ಗೊತ್ತಿರದ ಇವರಿಗೆ ಸಂಭ್ರಮದ ಪರಿವೆಯೂ ಇಲ್ಲದೆ, ಸಂಕಟವನ್ನೇ ಬದುಕಿನ ಭಾಗವಾಗಿಸಿಕೊಂಡು ತಮ್ಮ ಧಣಿಗಳಿಗೆ ಮೈ-ಮನಸ್ಸು ಎರಡನ್ನು ಅರ್ಪಿಸಿದರೂ, ಭೂಮಿಯ ಒಡನಾಟ ತಮ್ಮ ದಿನನಿತ್ಯದ ಬದುಕಿನ ಭಾಗವಾದರರೂ, ಒಡೆತನ ಸಿಗದೆ ಭೂಮಿಯ ಮಲಮಕ್ಕಳಾಗಿ ಬದುಕಿದ ಸಂದರ್ಭ ದಲಿತ ಸಮುದಾಯ ಶೋಷಣೆಯಿಂದ ಹೊರಬರುವ ಪ್ರತಿಭಟನೆಯ ಅಡಿಗಲ್ಲಾಗಿ ನನಗೆ ಕಾಣಿಸುತ್ತದೆ.

**"ಅರಳುವ ಹೂವಿನ ದಳದಳಗಳಲ್ಲಿ ಅಪ್ಪನ ಬೆವರಿನ ರಕ್ತವು ಸೋರಿ ಕೆಂಪಾದವು ಹೂವು"** ತಮ್ಮ ವೈಭವದ ಸೂಚಕವಾಗಿ ಸಿದ್ಧ ಮಾಡಿಕೊಂಡಿರುವ ಉದ್ಯಾನವನದಲ್ಲಿ ಕಂಗೊಳಿಸುವ ಹೂವುಗಳು ತಮ್ಮ ಶ್ರಮದಿಂದಲೇ ರೂಪುಗೊಂಡಿದೆ. ಆ ಹೂವಿನ ದಳದಲ್ಲಿ ಅಪ್ಪನ ರಕ್ತವು ಸೋರಿ ಹೂವುಗಳೆಲ್ಲಾ ಕೆಂಪಾಗಿದೆ. ಚೋಮನ ಬೆವರಿನ ವಾಸನೆ ಅಲ್ಲಿಯ ಪ್ರತಿವಸ್ತುವಿನ ಮೇಲಿದ್ದರೂ, ಯಜಮಾನಿಕೆಯ ವ್ಯವಸ್ಥೆಯ ಅಡಿಯಲ್ಲಿ ನೊಂದ ಚೋಮನ ಬವಣೆ ಬದಲಾಗಲಿಲ್ಲ. ತಲೆತಲೆಮಾರುಗಳಿಂದ ದುಡಿಮೆ ಎಂಬುದು ಜೀತವಾಗಿ ಬೆಳೆದು, ಪರಂಪರಾಗತವಾದ ಪದ್ಧತಿಯಾಗಿ ಚೋಮನ ಮಕ್ಕಳು ಸಹ ಇದರಿಂದ ಮುಕ್ತರಾಗದ ಸಂದರ್ಭ ಮನಮಿಡಿಯುವಂತದ್ದು. ಒಡೆಯರ ವೈಭವಕ್ಕೆ ಕಾರಣವಾದ ಚೋಮನಂತಹ ಶ್ರಮಿಕರ ಶ್ರಮ ವ್ಯರ್ಥವಾಗಬಾರದಿತ್ತು. ಇವನ ಶ್ರಮಕ್ಕೆ ತಕ್ಕಂತೆ ಬೇಡಿದ ಭೂಮಿಯನ್ನು ನೀಡಿದ್ದರೆ ಚೋಮನ ಎಲುಬುಗಳಾದ ಅವನ ಮಕ್ಕಳ ಮುಂದಿನ ದಿನಗಳು ಬಹುಶಃ ಬೇರೆ ಆಯಾಮವನ್ನೇ ಪಡೆದುಕೊಳ್ಳುತ್ತಿತ್ತು. ಆದರೆ ನಿಸ್ವಾರ್ಥದ ಸೇವೆಗೆ ಧಣಿಗಳು ಮಣಿಯಲಿಲ್ಲ. ಚೋಮನ ಸ್ವಂತ ಭೂಮಿಯ ಕನಸು ನನಸಾಗಲಿಲ್ಲ. ಸ್ವಂತ ಭೂಮಿಯಲ್ಲಿ ನೊಗ ಕಟ್ಟಲಾರದ ಅಸಹಾಯಕ ಚೋಮ ದುರಂತದಲ್ಲಿ ಮರೆಯಾದರೆ, ಶೋಷಣೆಯ ಪಾರಂಪರ್ಯವು ಎರಡನೇ ತಲೆಮಾರಿನ ತನ್ನ ಮಕ್ಕಳಿಗೆ ಬಳುವಳಿಯಾಗಿ ದೊರೆತದ್ದು ವಿಷಾದಕರ. ದಿನಪೂರ್ತಿ ದುಡಿದರೂ ಭೂಮಿ ತಮ್ಮದೆಂದು ಹೇಳಲಾಗದ ನಿರ್ಭಾಗ್ಯರೂ ಸಮಾಜದ ದೃಷ್ಟಿಯಲ್ಲಿ ಮಲಮಕ್ಕಳು ಎಂದು ಕರೆಸಿಕೊಳ್ಳುವ ಇವರಲ್ಲಿ ರೋಸಿಹೋದ ನೋವು ಮಡುಗಟ್ಟಿ ಪ್ರತಿಭಟನೆಯ ಹಂತಕ್ಕೆ ತಲುಪಲಾಗದ, ಅಂದಿನ ವ್ಯವಸ್ಥೆಯ ವಿರುದ್ಧ ತಿರುಗಿ ಬೀಳಲಾರದ, ಅಸಹಾಯಕನ ಸ್ಥಿತಿ ಎರಡನೇ ತಲೆಮಾರಿನ ಚೋಮನ ಮಕ್ಕಳ ಮೂಲಕ ಭಾಸವಾಗುತ್ತದೆ. ಶ್ರೀಮಂತ ವರ್ಗಕ್ಕೆ ಬಡವರ ದುಡಿಯುವವರ ಬೆಲೆ ಏನೆಂದು ತಿಳಿಯಬೇಕಾದರೆ, ಕ್ರಾಂತಿಯ ಕಿಡಿ ಎಲ್ಲೆಲ್ಲೋ ಪಸರಿಸಬೇಕಾಗಿದೆ ಎಂದು ಕವಿ ಧ್ವಾಳವಾಗಿ ಮುಟ್ಟಿಸಿದ್ದಾರೆ.

ಶೋಷಣೆಯ ಹಾದಿಯಲ್ಲಿ ನಮಗೆ ಗೋಚರಿಸುವ ಮತ್ತೊಂದು ಕವಿತೆಯೇ '**ಹೊಲಮಾದಿಗರ ಹಾಡು**' ಕವಿ ಸಿದ್ಧಲಿಂಗಯ್ಯನವರು ಶೋಷಣೆಗೆ ಒಳಗಾದವರನ್ನು 'ನನ್ನ ಜನರು' ಎಂದು ಸಂಬೋಧಿಸುವ ಮೂಲಕ ದಲಿತ ಶೋಷಣೆಯ ವಿರುದ್ಧ ಕ್ರಾಂತಿಯ ಕಿಚ್ಚನ್ನು ಹಚ್ಚಿದ ನಾಯಕನಾಗಿ ಕಾಣಿಸುತ್ತಾರೆ. "**ಹಸಿವಿನಿಂದ ಸತ್ತೋರು ಸೈಜುಗಲ್ಲು ಹೊತ್ತೋರು ಒದೆಸಿಕೊಂಡು ಒರಗಿದೋರು ನನ್ನ ಜನಗಳು**" - ಕವನದ ಈ ನುಡಿಗಳು ದಲಿತ ಜನಾಂಗ ಸಾಮಾಜಿಕವಾಗಿ ಮುಗ್ಧರಾಗಿ ಕಷ್ಟಪಟ್ಟು ಎಷ್ಟೇ ದುಡಿದರೂ ದುಡಿತಕ್ಕೆ ತಕ್ಕ ಪ್ರತಿಫಲ ದಕ್ಕದೇ ಹೇಗೆ ಅಸಹಾಯಕ ಸ್ಥಿತಿಯಲ್ಲಿ ನರಳುತ್ತಾರೆಂಬುದು ಸಮರ್ಥಕವಾಗಿ ಹಿಡಿದಿಟ್ಟಿದೆ. ನಿರಕ್ಷರಕುಕ್ಷಿಗಳಾದ ಇವರಿಗೆ ಬೆಳಗಿನಿಂದ ಸಂಜೆಯ ತನಕ ಬಿಸಿಲು, ಮಳೆ,  ಚಳಿ, ಗಾಳಿ ಎಂಬ ಅರಿವೇ ಇಲ್ಲದೆ, ಶಾರೀರಿಕವಾಗಿ ದುಡಿಯುವುದೊಂದೇ ಗೊತ್ತು. ಇವರ ಮೇಲೆ ನಡೆಯುವ ದಬ್ಬಾಳಿಕೆ, ದೌರ್ಜನ್ಯ, ಅಸಮಾನತೆಯ ಪರಿವೆಯೂ ಇಲ್ಲದ ಶೋಷಿತರನ್ನು ಕವಿ ಭಕ್ತರೆಂದು ಗುರುತಿಸುವ ಮೂಲಕ ತನ್ನ ಸಮುದಾಯವು ದೌರ್ಜನ್ಯಕ್ಕೀಡಾಗಿ, ಪ್ರಾಥಮಿಕ ಅವಶ್ಯಕತೆಗಳಾದ ಅನ್ನ, ಬಟ್ಟೆ, ವಸತಿ, ಸೌಕರ್ಯಗಳು ಸಿಗದೇ ಹೇಗೆ ನೋವು ಸಂಕಟದಿಂದ ಬಳಲುತ್ತಿದ್ದಾರೆ ಎಂಬುದನ್ನು ತಿಳಿಸುವಂತಹ ಈ ಸಾಲುಗಳು ಮಾರ್ಮಿಕವಾಗಿ ಕಾಣಿಸುತ್ತದೆ.

ಗುಡಿಸಲುಗಳು ಗುಡುಗುತ್ತಿವೆ ಬಂಗಲೆಗಳು ನಡುಗುತ್ತಿವೆ - ಅಕ್ಷರ ಕ್ರಾಂತಿಯ ಪೂರ್ವದಲ್ಲಿ ಈ ಸಾಲುಗಳು ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದ್ದವು. ಆದರೆ, ಅದು ಈಗ ಇತಿಹಾಸ. ಕಾಲ ಬದಲಾಗಿದೆ. ಶೋಷಿತರಿಗೆ ನಿಧಾನವಾಗಿ ಪ್ರಜ್ಞೆ ಮೂಡತೊಡಗಿದೆ. ಶತಮಾನಗಳಿಂದ ತುಳಿತಕ್ಕೆ ಒಳಗಾಗಿದ್ದ ಗುಡಿಸಲುಗಳು ಗುಡುಗಲು ಶುರುಮಾಡಿದೆ. ಅವರ ನೋವು, ಸಂಕಟಗಳ ಆಕ್ರೋಶದ ಗುಡುಗಿಗೆ ಸೊಕ್ಕಿದ ಬಂಡವಾಳಶಾಹಿಗಳು, ಸುಖಲೋಲುಪತೆಯ ಬಂಗಲೆಗಳು ನಡುಗುತ್ತಿವೆ. ಸಮಾಜದಲ್ಲಿನ ಅನ್ಯಾಯ, ಅಧರ್ಮದ ವಿರುದ್ಧ ಪುಟಿದೇಳುವ, ಸಿಡಿದೇಳುವ, ಆ ಮೂಲಕ ತನ್ನ ಸ್ವಾತಂತ್ರ್ಯವನ್ನು, ಹಕ್ಕನ್ನು, ಪಡೆದುಕೊಳ್ಳುವ  ಪ್ರತಿಯೊಬ್ಬನು ಜ್ಞಾನಿ ಆಗುತ್ತಿದ್ದಾನೆ. ಅಷ್ಟೇ ಅಲ್ಲದೆ, ಸಮಾಜದಲ್ಲಿ ವರ್ಗಗಳ ನಡುವಿನ ಅಂತರ ಹೆಚ್ಚಾಗುತ್ತಾ ಹೋದಂತೆಲ್ಲ ವರ್ಗಸಂಘರ್ಷ ಅನಿವಾರ್ಯವಾದ ವಿಚಾರಗಳಾಗಬೇಕು  ಎಂಬುದು ಇಲ್ಲಿ ಗಮನೀಯ.

ಇದೇ ಹಾದಿಯಲ್ಲಿ ಪಯಣಿಸಿದಾಗ ಜಾತಿಪದ್ಧತಿಯ ಕಟ್ಟುನಿಟ್ಟಿನ ಅನುಷ್ಠಾನದಿಂದಾಗಿ ದಲಿತರು ಸಾಮಾಜಿಕ ಶೈಕ್ಷಣಿಕ ರಾಜಕೀಯ ಮತ್ತು ಸಾಂಸ್ಕೃತಿಕ ಸವಲತ್ತುಗಳಿಂದ ವಂಚಿತರಾಗಿ ತಳ್ಳಲ್ಪಟ್ಟಿದ್ದಾರೆ ಎಂಬುದನ್ನು ತಿಳಿಸುವ ಕ್ರಾಂತಿಯ ಕವಿತೆಯೇ '**ಇಕ್ರಲಾ ಒದೀರ್ಲಾ ಈ ನನ್ ಮಕ್ಕಳ ಚರ್ಮ ಎಬ್ರಲ್ಲಾ**' - ಶತಮಾನಗಳಿಂದ ಶೋಷಣೆ ಎಂಬ ಸುಳಿಯಲ್ಲಿ ಸುರುಳಿಯಾಗಿ ಸುತ್ತಿ, ದಡ ಸೇರಲಾಗದ ದಲಿತರಿಗೆ ಸುಳಿಯ ಬಾಯಿಂದ ನುಸುಳಿ ಹೋಗುವ ದಾರಿ ದೊರೆತಾಗ, ಸತತವಾಗಿ ಒದೆಸಿಕೊಂಡವರಿಗೆ ಬಾಯಿ ಬಂದಾಗ, ತಮ್ಮ ನೋವು, ಸಂಕಟ, ಅಸಹಾಯಕತೆಗಳು ಅತಿರೇಕಕ್ಕೆ ಒಳಗಾದ ಸಂದರ್ಭದಲ್ಲಿ ಅವರ ಆಕ್ರೋಶದ ನುಡಿಗಳಾಗಿ ಈ ಸಾಲುಗಳು ನನಗೆ ಕಾಣಿಸುತ್ತದೆ. ಮುಖ್ಯವಾಗಿ ಭಾಷಾ ಪ್ರಯೋಗದಲ್ಲಿ ಅವರ ಪ್ರತಿಭಟನೆಯ ಜ್ವಾಲೆಗಳು ಎಷ್ಟು ಬಿಸಿಯಾಗಿದ್ದವೆಂಬುದನ್ನು, ಅವರ ಹೊಟ್ಟೆಯಲ್ಲಿನ ಆ ಸಂಕಟದ ರೂಪವೇ ಕವಿತೆಯ ಸಾಲುಗಳಾಗಿ ಹೊರಹೊಮ್ಮಿದೆ ಎಂಬುದು ನನ್ನ ಅಭಿಪ್ರಾಯ.

ನಮ್ಮ ಸಮಾಜದ ಮೂಲದಲ್ಲಿಯೇ ಅಂಟಿಕೊಂಡಿರುವ ಪಿಡುಗು ಈ ಜಾತೀಯತೆ. ಇದನ್ನು ತೊಡೆದು ಹಾಕಲು ನಡೆದ ಪ್ರಯತ್ನ ಅಪಾರ. ಪರಿವರ್ತನೆ ಎಂಬುದು ಮನದಾಳದಲ್ಲಿ ಹುಟ್ಟಿದಾಗ ಬದಲಾವಣೆಗಳು ತಾನಾಗಿಯೇ ಕಾಣುತ್ತವೆ. ಆಧುನಿಕತೆ, ಶಿಕ್ಷಣದ ಪ್ರಗತಿ, ಕೈಗಾರಿಕೀಕರಣ, ಜಾಗತೀಕರಣದಿಂದ ನಗರಗಳಲ್ಲಿ ಅಸ್ಪೃಶ್ಯತೆಯು ಸುಧಾರಿಸುತ್ತಿದೆ. ಇಂದಿನ ಮುಂದುವರೆದ ಪ್ರಜ್ಞಾವಂತ ಜನತೆಯಲ್ಲಿ ಮಾನವೀಯ ಮೌಲ್ಯಗಳ ಅರಿವು ಕಂಡಿದೆಯಾದರೂ, ಜಾತಿಮುಕ್ತ, ಸಂಘರ್ಷ ಮುಕ್ತ ಭಾರತವನ್ನು ಕಾಣಲಾಗುತ್ತಿಲ್ಲ. ದೇಶದಲ್ಲಿ ಮಾನವೀಯತೆಯು ಒಟ್ಟಾರೆಯಾಗಿ ತನ್ನ ಸ್ಥಾನವನ್ನು ಪ್ರಬಲೀಕರಿಸಿಕೊಂಡಾಗ ಪ್ರತಿಯೊಬ್ಬ ನಾಗರೀಕನು ವೈಚಾರಿಕ ನೆಲೆಗಟ್ಟಿನಲ್ಲಿ ನಿಂತು ಯೋಚಿಸಿದಾಗ ಮಾತ್ರ ಮೇಲು-ಕೀಳು ಎಂಬ ಸಂಘರ್ಷ ಮುಕ್ತ ನವ ಸಮಾಜವನ್ನು ಕಟ್ಟಬಹುದು. ಗಾಂಧೀಜಿ ಹೇಳುವ ಹಾಗೆ "ಸ್ನಾನಮಾಡಿಸಿ ಶುಚಿಗೊಳಿಸುವ ತಾಯಿಯನ್ನು ಮಗು ಕೃತಜ್ಞತೆಯಿಂದ ನೋಡುತ್ತದೆ, ಗಾಯವನ್ನು ತೊಳೆದು ಔಷಧಿ ಹಾಕಿ ಬಟ್ಟೆ ಕಟ್ಟುವ ವೈದ್ಯನನ್ನು ರೋಗಿ ಕೃತಜ್ಞತೆಯಿಂದ ನೋಡುತ್ತಾನೆ. ಆದರೆ ಊರನ್ನು ಶುಚಿಗೊಳಿಸುವ ಪೌರಕಾರ್ಮಿಕರನ್ನು ನಾವೇಕೆ ದೂರ ಇಟ್ಟಿದ್ದೇವೆ"? ಎಂಬ ಈ ಪ್ರಶ್ನೆಯನ್ನು ಶೋಷಕ ವರ್ಗದವರು ತಮಗೆ ತಾವು ಕೇಳಿಕೊಳ್ಳುವುದು ಅಸ್ಪೃಶ್ಯತಾ ನಿವಾರಣೆಗೆ ನಾಂದಿಯಾಗುತ್ತದೆ. ಮೇಲು-ಕೀಳಿನ ತರತಮ ನಿರ್ಮೂಲನೆಯಾಗದ ಹೊರತು ಭವ್ಯ ಭಾರತದ ಪರಿಕಲ್ಪನೆ ಪರಿಪೂರ್ಣವಾಗುವುದಿಲ್ಲ.


ಪರಾಮರ್ಶನ ಗ್ರಂಥಗಳು:

- ವಿಮರ್ಶೆಯ ಪರಿಭಾಷೆ : ಪ್ರೊ.ಓ.ಎಲ್ ನಾಗಭೂಷಣಸ್ವಾಮಿ
  ಅಂಕಿತ ಪ್ರಕಾಶನ, ಬೆಂಗಳೂರು 04
- ಸಾಹಿತ್ಯ ವಿಮರ್ಶೆ : ಲೇ. ಸಿ. ಎನ್ ರಾಮಚಂದ್ರನ್
  ಪ್ರಕಾಶನ: ಕರ್ನಾಟಕ ಸಾಹಿತ್ಯ ಅಕಾಡೆಮಿ.
  ಕನ್ನಡ ಭವನ, ಜೆ ಸಿ ರಸ್ತೆ, ಬೆಂಗಳೂರು 02, ನಾಲ್ಕನೇ ಆವೃತ್ತಿ : 2002
- ಸಾಹಿತ್ಯ ಸಂಸ್ಕೃತಿ ಮತ್ತು ದಲಿತಪ್ರಜ್ಞೆ : ಡಾ. ಅರವಿಂದ ಮಾಲಗತ್ತಿ
  ಪ್ರಕಾಶನ:ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ ಬೆಂಗಳೂರು-18
- ದಲಿತ ಸಾಹಿತ್ಯ ದರ್ಶನ ಸಂಪಾದಕರು: ಡಾ. ಬಿ ಮುನಿವೆಂಕಟಪ್ಪ ಪ್ರಕಾಶನ:ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ ಬೆಂಗಳೂರು-18